MS – 060

# IV Semester B.Com. Examination, May/June 2013
## (Repeaters) (2011-12 Only)
## ಕನ್ನಡ ಭಾಷಾ ಪತ್ರಿಕೆ - 4
## ಸಾಹಿತ್ಯ ಸಲ್ಲಾಪ - 2 ಮತ್ತು ವ್ಯಾವಹಾರಿಕ ಕನ್ನಡ

Time : 3 Hours | Max. Marks : 90

### ಭಾಗ - 1
### ಸಾಹಿತ್ಯ ಸಲ್ಲಾಪ - 2

I. ಭಾವಾರ್ಥವನ್ನು ಬರೆಯಿರಿ : (1×5=5)

ಹಂದಿ ಶ್ರೀಗಂಧವ ಪೂಸಿದಡೇನು ? ಗಂಧರಾಜನಾಗಬಲ್ಲುದೆ ?
ನವಿಲು ನಲಿಯಿತ್ತೆಂದಡೆ ಕಾಕೋಳಿ ಪುಚ್ಛವ ತೆರಕೊಂಡಂತೆ
ಕರ್ಮಿಗಳ ಭಕ್ತಿ !
ಹೊರ ವೇಷದ ವಿಭೂತಿ ರುದ್ರಾಕ್ಷಿಯ ಪೂಸಿದೊಡೇನು ?
ತೆರೆವನರಿದು, ಮರೆವೆಯ ಕಳೆದು
ಮಾತಿನಂತೆ ನೀತಿಯುಳ್ಳಡೆ
ಅವರನಚಿಂತರೆಂಬೆ ಕಾಣಾ ರಾಮನಾಥ.

II. ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. (3×5=15)

1) ಕಥಾನಾಯಕಿ ಸರೋಜಾಳಿಗೆ ಸಿಕ್ಕ ಬಿಡುಗಡೆ ಎಂತಹುದು ?
2) ಕೋಮುವಾದದ ಸ್ವರೂಪವನ್ನು ಬರಗೂರರು ಹೇಗೆ ವಿವರಿಸಿದ್ದಾರೆ ?
3) 'ಜಾಗತೀಕರಣದ ಜಾರುಬಂಡೆ' – ಲೇಖನದ ಹಿಂದಿರುವ ಸಾಮಾಜಿಕ ಕಳಕಳಿಯನ್ನು ತಿಳಿಸಿ.
4) ಗ್ರಹಣಕಾಲದಲ್ಲಿ ಸೂರ್ಯನನ್ನು ನೋಡಲು ಜನ ಹೆದರಲು ಕಾರಣವೇನು ?
5) ಮಾರನ ಒಂದು ಕಡೆಯ ಹಲ್ಲುಗಳು ಬಿದ್ದು ಹೋಗಿರುವ ಬಗ್ಗೆ ಆತ ಹೇಳಿದ ಕತೆ ಏನು ?

III. ಯಾವುದಾದರೂ **ಮೂರು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. (3×10=30)

1) ನಿಷ್ಠೆಯಿಲ್ಲದ ಭಕ್ತಿಯ ವಿಡಂಬನೆ ವಚನಗಳಲ್ಲಿ ಹೇಗೆ ಮೂಡಿಬಂದಿದೆ ?
2) ''ಮಾರನ ಕತೆಗಳು ಮಾತ್ರ ಸುಳ್ಳಾಗಿದ್ದರೂ ಸುಂದರವಾಗಿರುತ್ತಿದ್ದವು'' ಎಂಬ ಹೇಳಿಕೆಯನ್ನು ವಿವರಿಸಿ.
3) 'ಮನುಷ್ಯನ ಗುಣಸ್ವಭಾವಗಳು' ವಚನಗಳಲ್ಲಿ ಹೇಗೆ ವಿಡಂಬನೆಗೊಳಗಾಗಿವೆ ?
4) ಪುಸ್ತಕ, ವೃಕ್ಷ, ನದಿ – ಈ ಸಂಕೇತಗಳ ಮೂಲಕ ಬುದ್ಧನ ವ್ಯಕ್ತಿತ್ವ ಅರಿಯುವ ಬಗೆಯನ್ನು ವಿವರಿಸಿ.
5) ಸರೋಜಾಳ ಮಾನಸಿಕ ತಾಕಲಾಟದ ಸ್ವರೂಪ ಕತೆಯಲ್ಲಿ ಹೇಗೆ ಮೂಡಿಬಂದಿದೆ ?



31

## ಭಾಗ - 2

## ವ್ಯಾವಹಾರಿಕ ಕನ್ನಡ

IV. ಯಾವುದಾದರೂ **ನಾಲ್ಕನ್ನು** ಕುರಿತು ಟಿಪ್ಪಣಿ ಬರೆಯಿರಿ. **(4×5=20)**

1) ಸಮಿತಿಯ ವರದಿಗಳು
2) ಕಾರ್ಯಕ್ರಮ ಪಟ್ಟಿ
3) ರಾಜಕೀಯ ವರದಿ
4) ತಿಳಿವಳಿಕೆ ಪತ್ರ
5) ತಂತ್ರಾಂಶದ ಬಳಕೆ
6) ಕನ್ನಡ ಮತ್ತು ವಾಕ್‌ಸಂಶ್ಲೇಷಣೆ.

V. ಯಾವುದಾದರೂ **ಎರಡು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. **(2×10=20)**

1) ಆಹ್ವಾನ ಪತ್ರಿಕೆಯ ಲಕ್ಷಣಗಳನ್ನು ತಿಳಿಸಿ. ಕಾಲೇಜಿನ ಸಾಂಸ್ಕೃತಿಕ ಕಾರ್ಯಕ್ರಮದ ಉದ್ಘಾಟನೆಯ ಆಹ್ವಾನ ಪತ್ರಿಕೆಯನ್ನು ತಯಾರಿಸಿ.
2) ಜಾಹೀರಾತುಗಳು ಎಂದರೇನು ? ಅದರ ವಿಧಗಳನ್ನು ಪರಿಚಯಿಸಿ.
3) ಟೆಂಡರ್ ಎಂದರೇನು ? ಅದರ ಪ್ರಮುಖ ಭಾಗಗಳನ್ನು ವಿವರಿಸಿ.
4) ''ಕಂಪ್ಯೂಟರ್ ನಮ್ಮ ದಿನ ಜೀವನದ ಅವಿಭಾಜ್ಯ ಅಂಗ'' ಎಂಬುದನ್ನು ಚರ್ಚಿಸಿ.